# 3. ಶಿಕ್ಷಕ ದಿನಾಚರಣೆ



ಇವರಿಂದ
ಮಂದಾರ ಭೋಸಲೆ,
ಶಾರದಾಶ್ರಮ,
ದಾದರ (ಪಶ್ಚಿಮ),
ಮುಂಬಯಿ 400 014
ದಿನಾಂಕ : 8.9.2001

ಒಲವಿನ ಸಹೋದರಿ ಶುಭಾಂಗಿ,

ನಿನ್ನ ಪತ್ರ ಸಿಕ್ಕಿತು. ನಿಮ್ಮ ಶಾಲೆಯಲ್ಲಿ ನಡೆದ ಬಾಲಸಭೆಯ ಸುದ್ದಿ ಕೇಳಿ ಸಂತೋಷವಾಯಿತು. ನಾನು ನಿನಗೆ ನಮ್ಮ ಶಾಲೆಯಲ್ಲಿ ನಡೆದ ಶಿಕ್ಷಕ ದಿನದ ಕುರಿತು ತಿಳಿಸಲು ಆತುರನಾಗಿದ್ದೇನೆ.

ಮೊನ್ನೆ ಸಪ್ಟೆಂಬರ 5ರಂದು ನಮ್ಮ ಶಾಲೆಯಲ್ಲಿ ಶಿಕ್ಷಕ ದಿನವನ್ನು ಆಚರಿಸಿದೆವು. ಅಂದು ಡಾಕ್ಟರ್ ರಾಧಾಕೃಷ್ಣನ್ ಅವರ ಹುಟ್ಟುಹಬ್ಬ ಅಲ್ಲವೆ ? ಡಾ। ರಾಧಾಕೃಷ್ಣನ್ ಆದರ್ಶ ಶಿಕ್ಷಕರಾಗಿದ್ದರು. ಅವರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡಿದರು. ತಮ್ಮ ಪಾಂಡಿತ್ಯ, ಪ್ರತಿಭೆ, ಪ್ರಾಮಾಣಿಕ ಪ್ರಯತ್ನಗಳಿಂದ ಮುಂದೆ ಡಾ। ರಾಧಾಕೃಷ್ಣನ್ನರು ಭಾರತದ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಿದರು. ಡಾ। ರಾಧಾಕೃಷ್ಣನ್ನರಿಗೆ ಶಿಕ್ಷಕರೆಂದರೆ ಬಹಳ ಆದರ, ಪ್ರೀತಿ. ಆದುದರಿಂದ ನಾವು ಅವರ ಹುಟ್ಟುಹಬ್ಬವನ್ನು ಶಿಕ್ಷಕ ದಿನವೆಂದು ಆಚರಿಸುತ್ತೇವೆ. ನಾವು ಆಚರಿಸಿದ ಶಿಕ್ಷಕ ದಿನದ ಕುರಿತು ನನಗೆ ತುಂಬ ಹೆಮ್ಮೆ ಎನಿಸುತ್ತದೆ.

ನಮ್ಮ ಶಾಲೆಯಲ್ಲಿ ಹತ್ತನೆಯ ವರ್ಗದ ಮಕ್ಕಳು ಅಂದು ಶಿಕ್ಷಕರಾಗಿ ಬೇರೆ ಬೇರೆ ವರ್ಗಗಳಿಗೆ ಪಾಠ ಕಲಿಸಿದರು. ಅಂದು ಹತ್ತನೆಯ ವರ್ಗದ ಪ್ರಕಾಶನು ಮುಖ್ಯಾಧ್ಯಾಪಕನಾಗಿದ್ದನು. ಹರೀಶನು ನಮ್ಮ ವರ್ಗದ ಗಣಿತ ಶಿಕ್ಷಕನಾಗಿದ್ದನು. ಕಾಸೀಮನು ಏಳನೆಯ ವರ್ಗಕ್ಕೆ ವಿಜ್ಞಾನ ಕಲಿಸಿದನು. ಕ್ರಿಸ್ಟಲ ಎಂಟನೆಯ ವರ್ಗಕ್ಕೆ ಕನ್ನಡ ಕಲಿಸಿದಳು. ನಾವೆಲ್ಲ ಅವರಿಗೆ ವಿಧವಿಧವಾದ ಪ್ರಶ್ನೆ ಕೇಳಿದೆವು.

ಮಧ್ಯಾಹ್ನ ಹನ್ನೆರಡು ಗಂಟೆಗೆ ನಾವೆಲ್ಲ ಸಭಾಗೃಹದಲ್ಲಿ ಸೇರಿದೆವು. ವೇದಿಕೆಯಲ್ಲಿ ಡಾ। ರಾಧಾಕೃಷ್ಣನ್ನರ ಭಾವಚಿತ್ರ ಇಟ್ಟಿದ್ದರು. ಅದಕ್ಕೆ ಸುಂದರವಾದ ಹಾರವನ್ನು ಹಾಕಿದ್ದರು. ಪ್ರಕಾಶ ಅಂದಿನ ಸಭೆಯ ಅಧ್ಯಕ್ಷನಾಗಿದ್ದನು. ಹೇಮಾ, ಮತ್ತು ಬಸಪ್ಪ ಡಾ। ರಾಧಾಕೃಷ್ಣನ್ನರ ಕುರಿತು ಭಾಷಣ ಮಾಡಿದರು.



ಆ ಬಳಿಕ ಪ್ರಕಾಶನು ಭಾಷಣ ಮಾಡಿದನು. ಸೀಮಾ ಧನ್ಯವಾದ ಅರ್ಪಿಸಿದಳು. ನಾವು ಎಲ್ಲ ಶಿಕ್ಷಕರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವ ಸಲ್ಲಿಸಿದೆವು. ವಿದ್ಯಾರ್ಥಿ ಶಿಕ್ಷಕರಿಗೂ ಗುಲಾಬಿ ಹೂ ನೀಡಿದೆವು. ' ನಾನು ಆದರ್ಶ ಗುರು' ಎಂಬ ಕವಿತೆಯನ್ನು ಬರೆದು ನನ್ನ ನೆಚ್ಚಿನ ಗುರುಗಳಿಗೆ ಅರ್ಪಿಸಿದೆನು. ಗುರುಗಳು ಸಂತೋಷದಿಂದ ' ಹೀಗೆಯೇ ಬರೆಯುತ್ತಿರು', ಎಂದು ನನ್ನ ಬೆನ್ನು ತಟ್ಟಿದರು.

ನಿಮ್ಮಲ್ಲಿಯೂ ಶಿಕ್ಷಕ ದಿನ ಆಚರಿಸಿರಬೇಕು, ಅಲ್ಲವೆ ? ಅದನ್ನು ತಿಳಿಸಲು ಮರೆಯಬೇಡ.

ಶುಭಾಂಗಿ, ಅಪ್ಪ , ಅಮ್ಮನಿಗೆ ನನ್ನ ವಂದನೆಗಳನ್ನು ತಿಳಿಸು. ನಾನು ದೀಪಾವಳಿ ರಜೆಯಲ್ಲಿ ಊರಿಗೆ ಬರುವೆನು. ಆಗ ನಿನಗೆ ಒಂದು ಸುಂದರವಾದ ಕಾಣಿಕೆ ತರುವೆನು. ನಿಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಆಗಾಗ ತಿಳಿಸುತ್ತಿರು.

ನಿನ್ನ ಪ್ರೀತಿಯ ಅಣ್ಣ,
ಮಂದಾರ.

ಗೆ............

ಶುಭಾಂಗಿ ಭೋಸಲೆ,
ಶ್ರೀನಿವಾಸ ನಿವಾಸ,
ವಿಶ್ರಾಮಬಾಗ,
ಸಾಂಗಲಿ – 416 416.

## ಶಬ್ದಗಳ ಅರ್ಥ

ಪಾಂಡಿತ್ಯ – ಜಾಣತನ ; ಪ್ರತಿಭೆ – ಸಾಮರ್ಥ್ಯ ; ವೇದಿಕ – ಸಭಾಸ್ಥಾನ.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

  ಕೀಟಲೆ – ............ ; ನೆಚ್ಚಿನ – ............ ; ಧನ್ಯವಾದ – ............. ; ಅರ್ಪಿಸು – ............ ;

## ಅಭ್ಯಾಸ

### ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಯಾರ ಶಾಲೆಯಲ್ಲಿ ಬಾಲಸಭೆ ಇತ್ತು ?

ಉತ್ತರ ..............................................................................

ಆ) ಸಪ್ಟೆಂಬರ 5 ಈ ದಿನವನ್ನು ಯಾವ ದಿನವೆಂದು ಕರೆಯುತ್ತಾರೆ ?

ಉತ್ತರ ..............................................................................

ಇ) ಅಂದು ಶಾಲೆಯಲ್ಲಿ ಯಾವ ವರ್ಗದ ವಿದ್ಯಾರ್ಥಿ ಮುಖ್ಯೋಪಾಧ್ಯಾಯನಾದನು?

ಉತ್ತರ ..............................................................................

### ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..............................................................................

ಉತ್ತರ ..............................................................................

ಆ) ..............................................................................

ಉತ್ತರ ..............................................................................

**ಪ್ರಶ್ನೆ 3) ಕೆಳಗಿನ ವಾಕ್ಯಗಳ ಕೊನೆಗೆ ಕೊಟ್ಟಿರುವ ಚೌಕಟ್ಟಿನ ಉತ್ತರಗಳನ್ನು ಕೆಳಗಿನವುಗಳಿಂದ ಆಯ್ದು ಬರೆಯಿರಿ.**

ಹರೀಶ, ಶಿರೀನ, ಪ್ರಕಾಶ, ಕಾಸೀಮ

1) ಏಳನೆಯ ವರ್ಗಕ್ಕೆ ವಿಜ್ಞಾನ ಕಲಿಸಿದವನು. [ ]

2) ಮುಖ್ಯಾಧ್ಯಾಪಕನಾಗಿದ್ದ ವಿದ್ಯಾರ್ಥಿ. [ ]

3) ಮಂದಾರನ ವರ್ಗಕ್ಕೆ ಗಣಿತ ಕಲಿಸಿದವನು. [ ]

4) ಎಂಟನೆಯ ವರ್ಗಕ್ಕೆ ಕನ್ನಡ ಕಲಿಸಿದವನು. [ ]

**ಪ್ರಶ್ನೆ 4) ಕೆಳಗಿನ ದಿನಾಂಕಗಳಲ್ಲಿ ಯಾವ ಯಾವ ದಿನಾಚರಣೆ ಆಚರಿಸುತ್ತಾರೆ?**

ಉದಾ : ಸಪ್ಟೆಂಬರ 5 – ಶಿಕ್ಷಕರ ದಿನಾಚರಣೆ

ನವ್ಹೆಂಬರ 14 ..................

ಅಕ್ಟೋಬರ 2 ..................

ಮೇ 1 ..................

ಅಗಸ್ಟ್ ..................

**ಪ್ರಶ್ನೆ 5) ಕೆಳಗಿನ ಶಬ್ದಗಳ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಾಮಾಣಿಕ X ಆದರ X

ಹಗಲು X ಗೌರವ X

**ಉಪಕ್ರಮ :** ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆ ಕುರಿತು ನಿಮ್ಮ ಗೆಳೆಯನಿಗೆ ಪತ್ರ ಬರೆಯಿರಿ.